**O.S.** 62/2016

ಡಿ ಡಬ್ಲ್ಯೂ-**1**

<u>ಸಾಕ್ಷಿಯನ್ನು ದಿಃ**11.12.2023** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಶ್ರೀ ಜಿ ಕೆ ಎಂ ವಕೀಲರಿಂದಃ</u>**

ನನಗೆ ಕನ್ನಡ ಭಾಷೆ ಓದಲು ಬರುತ್ತದೆ. ಆದರೆ ಬರೆಯಲು ಬರುವುದಿಲ್ಲ. ಅದೇ ರೀತಿ ನನಗೆ ಇಂಗ್ಲಿಷ್ ಓದಲು ಬರುತ್ತದೆ ಬರೆಯಲು ಬರುವುದಿಲ್ಲ. ನನ್ನ ಗಂಡನಿಗೆ ಕನ್ನಡ ಇಂಗ್ಲಿಷ್ ಓದಲು ಬರುತ್ತದೆ ಎಂದರೆ ಸಾಕ್ಷಿ ಕನ್ನಡ ಬರುತ್ತದೆ ಆದರೆ ಇಂಗ್ಲೀಷ್ ಬರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಹಿರಿಯ ಮಗ ಡಿಗ್ರಿ ವಿದ್ಯಾಭ್ಯಾಸ ಮಾಡಿದ್ದು ನಿಪಿ-1 ಆಗಿದ್ದ ಸಮಯಕ್ಕೆ ಆತ ದ್ವಿತೀಯ ಪಿ ಯುಸಿ ಓದುತ್ತಿದ್ದ. ನನ್ನ ಮಗ ಸಿ ಮಂಜು ಹಿರಿಯೂರಿನ ಜೂನಿಯರ್ ಕಾಲೇಜಿನಲ್ಲಿ ಪಿ ಯು ಸಿ ವಿದ್ಯಾಭ್ಯಾಸ ಮಾಡಿದ್ದಾನೆ. ನಾನು, ನನ್ನ ಯಜಮಾನ ಹಾಗೂ ನನ್ನ ಮಗ ಯಾವುದೇ ಪತ್ರಕ್ಕೆ ಸಹಿ ಹಾಕುವ ಮುಂಚೆ ಓದಿ ಓದಿಸಿ, ತಿಳಿದುಕೊಂಡು ಸರಿ ಇದೆಯೇ ಎಂದು ಗೊತ್ತಾದ ಮೇಲೆ ಸಹಿ ಮಾಡುತ್ತೇವೆ.

ಈ ದಾವೆಯು ಸರ್ವೆ ನಂ.26/10 ರ 8 ಎಕರೆ ಜಮೀನಿಗೆ ನಡೆಯುತ್ತಿದೆ. ಸದರಿ ಜಮೀನು ಮೊದಲು ಪಿ ಎಲ್ ಡಿ ಬ್ಯಾಂಕ್ ನಲ್ಲಿ ಆಧಾರ ಮಾಡಿ ಸಾಲ ಪಡೆದುಕೊಂಡಿದ್ದೇವೆ ಎಂದರೆ ಸಾಕ್ಷಿ ಅದರ ಬಗ್ಗೆ ತನಗೆ ಗೊತ್ತಿಲ್ಲ ತನ್ನ ಮಾವ ಕರ್ಪಣ ಗೌಡ  ಮಾಡಿದ್ದಾನೆ ಎಂದು ತಿಳಿಸುತ್ತಾರೆ. ನನ್ನ ಮಾವ ಸದರಿ ಸಾಲ ಯಾವಾಗ ಮಾಡಿದ್ದ ಎಂದು ನನಗೆ ಗೊತ್ತಿಲ್ಲ.  ನನ್ನ ಯಜಮಾನರು ದಾವಾ ಸ್ವತ್ತನು ಆಧಾರ ಮಾಡಿ ಯಾವುದೇ ಸಾಲ ಪಡೆದಿಲ್ಲ. 2003 -04 ರಲ್ಲಿ ನನ್ನ ಗಂಡ ಹಿರಿಯೂರಿನ ಪಿ ಎಲ್ ಡಿ ಬ್ಯಾಂಕ್ ನಲ್ಲಿ ದಾವಾ ಸ್ವತ್ತು ಆಧಾರ ಮಾಡಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವ ದಾವಾ ಸ್ವತ್ತಿನ ಮೇಲೆ ಮಾಡಿದ ಸಾಲದ

ಬಗ್ಗೆ ನನಗೆ ಏನು ಮಾಹಿತಿ ಇಲ್ಲ. ನನ್ನ ಗಂಡನಿಗೆ ದಾವಾ ಸ್ವತ್ತು ತಾನು ಪಿ ಎಲ್ ಡಿ ಬ್ಯಾಂಕ್ ನಲ್ಲಿ ಆಧಾರ ಮಾಡಿ ಸಾಲ ಪಡೆದುಕೊಂಡಿದ್ದಾರೋ ಅಥವಾ ಇಲ್ಲವೋ ಎಂದು ವಿಚಾರಿಸಿದ್ದು ಅವರು ಆ ರೀತಿ ಸಾಲ ಮಾಡಿಲ್ಲ ಎಂದು ಹೇಳಿದ್ದರು. ನನ್ನ ಮಾವ ಮಾಡಿದ ಸಾಲ ಅವರೇ ತೀರಿಸಿದ್ದರು ಆದರೆ ಬ್ಯಾಂಕಿನಿಂದ ಕ್ಲಿಯರೆನ್ಸ್ ಸರ್ಟಿಫಿಕೇಟ್ ಪಡೆದುಕೊಂಡಿರಲಿಲ್ಲ ನಂತರ ನಾವು ಪಡೆದುಕೊಂಡವು. ಸದರಿ ಪ್ರಮಾಣ ಪತ್ರ 1995 ಪಡೆದುಕೊಂಡಿರಬಹುದು. ನನ್ನ ಮಾವ 4 ವರ್ಷಗಳ ಹಿಂದೆ ಮೃತ ಪಟ್ಟಿದ್ದಾರೆ. ಸಾಲಗಾರ ಸಾಲ ಸಂಪೂರ್ಣವಾಗಿ ಪಾವತಿಸಿದ ನಂತರವೇ ಅವರಿಗೆ ಕ್ಲಿಯರೆನ್ಸ್ ಪ್ರಮಾಣ ಪತ್ರ ಕೊಡುತ್ತಾರೆ ಎಂದರೆ ನಿಜ ಸಾಲ ಪಾವತಿಸಿದ ನಂತರ ಕ್ಲಿಯರೆನ್ಸ್ ಪ್ರಮಾಣ ಪತ್ರ ಪಡೆದಿದ್ದ ಬಗ್ಗೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ದಾವಾ ಸ್ವತ್ತು ಸಾಲ ಮುಕ್ತವಾದ ಜಮೀನು ಆಗಿರುತ್ತದೆ.

ವಾದಿಯು ಈ ದಾವೆ ಏನು ಪರಿಹಾರ ಕೋರಿ ಸಲ್ಲಿಸಿದ್ದೇವೆ ಎಂದು ನಾನು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿದ್ದೇವೆ. ಸಾಕ್ಷಿಯು ಮುಂದುವರೆದು ವಾದಿಯಿಂದ ಬಡ್ಡಿ ಸಮೇತ ಸಲಾ ಪಡೆದುಕೊಂಡಿದ್ದು ಅದರ ತೀರುವಳಿಗೆ ಎಂದು ಕಾಗದ ಬರೆದು ಕೊಟ್ಟ ಬಗ್ಗೆ ಈ ದಾವೆ ಇರುತ್ತದೆ. ಸ್ವತ್ಯನಾರಾಯಣ ಚಾರ್ ಈ ದಾವೆಯಲ್ಲಿ ಏನೇನು ದಾಖಲಾತಿಗಳನ್ನು ಹಾಕಿದ್ದಾರೆ ಎಂದು ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ. ಈ ದಾವೆಯಲ್ಲಿ ನಾವು ಸಲ್ಲಿಸಿರುವ ತಕರಾರಿನಲ್ಲಿ ಏನೇನು ಬರೆದು ಹಾಕಿದ್ದೇವೆ ಎಂದು ತಿಳಿದುಕೊಂಡಿದ್ದೇವೆ. ನಮ್ಮ ತಕರಾರಿನ ಜೊತೆ ಯಾವುದೇ ದಾಖಲೆ ಕೊಟ್ಟಿಲ್ಲ. ನಮ್ಮ ತಕರಾರಿನಲ್ಲಿ ಹೇಳಿರುವಂತೆ ಕೋಮದಿ ಇವರಿಗೆ ಯಾವ ದಿನಾಂಕಕ್ಕೆ ಕ್ರಯದ ಕರಾರು ಬರೆದುಕೊಟ್ಟಿದ್ದೇನೆ ಎಂದು ನಿಖರವಾಗಿ ಗೊತ್ತಿಲ್ಲ ಸದರಿ ಕ್ರಯದ ಕರಾರು ಪತ್ರ ರೂ9 ಲಕ್ಷಕ್ಕೆ ಮಾಡಿಕೊಂಡಿದ್ದೇವೆ. ಸದರಿ ಕ್ರಯದ ಕರಾರು ಪತ್ರ ನೊಂದಣಿಯಾಗಿರುವುದಿಲ್ಲ. ಸದರಿ ಕ್ರಯದ ಕರಾರು ಪತ್ರ 1 ಎಕರೆಗೆ ಸಂಬಂಧಪಟ್ಟಿದೆ. ಕೋಮದಿಗೆ ಬರೆದುಕೊಟ್ಟ ಕ್ರಯದ ಕರಾರಿನಲ್ಲಿ ನಾನು ನನ್ನ ಗಂಡ ಮತ್ತು ಮಕ್ಕಳು ಸಹಿ

ಮಾಡಿದ್ದೇವೆ. ಸದರಿ ಕ್ರಯದ ಕರಾರು ಆಗುವಾಗ ಕೋಮದಿಯಿಂದ ಯಾವುದೇ ಮುಂಗಡ ಹಣ ಪಡೆದುಕೊಂಡಿಲ್ಲ. ಏಕೆಂದರೆ ತನ್ನ ಗಂಡ ಸ್ಟವ್ ಬರಸ್ಟಾಗಿ ಆತನ ದೇಹ ಸುಟ್ಟು ಹೋಗಿತ್ತು ಅದರ ಚಿಕಿತ್ಸೆಗಾಗಿ ಕೋಮದಿಯಿಂದ ಆಗಾಗ ಚಿಲ್ಲರೆ ಹಣ ಪಡೆದುಕೊಂಡಿದ್ದು ಒಟ್ಟು 9 ಲಕ್ಷಕ್ಕೆ ಸದರಿ ಪತ್ರ ಬರೆದುಕೊಟ್ಟಿದ್ದೇವೆ ಕೋಮದಿಗೆ ಬರೆದುಕೊಟ್ಟ ಪತ್ರದಂತೆ ನಾವು ಪಡೆದುಕೊಂಡ 9 ಲಕ್ಷಕ್ಕೆ 1 ಕರೆ ಜಮೀನು ಆಧಾರ ಮಾಡಿದ್ದೇವೆ. ಸದರಿ ರೂ.9 ಲಕ್ಷ ಕೋಮದಿಗೆ ತೀರುವಳಿ ಮಾಡಿದ್ದೇವೆ.  ಸದರಿ ರೂ.9 ಲಕ್ಷವನ್ನು ವಾದಿಯಿಂದ ಕರಾರು ಮಾಡಿದಾಗ ರೂ.5 ಲಕ್ಷ ಹೀಗೆ ಒಟ್ಟು 9 ಲಕ್ಷವನ್ನು ಒಟ್ಟು 7 ರಿಂದ 8 ವರ್ಷ ಹಿಂದಿಯೇ ಕೋಮದಿಗೆ ಪಾವತಿಸಿದ್ದೇವೆ. ಸದರಿ ರೂ.9 ಲಕ್ಷ ಪಾವತಿಸಿದಾಗ ನಾನು, ನನ್ನ ಗಂಡ ಮತ್ತು ಮಕ್ಕಳು ಇದ್ದೆವು. ಬೇರೆ ಯಾರು ಇರಲಿಲ್ಲ. ಕೋಮದಿಗೆ ರೂ.9 ಲಕ್ಷ ಕೊಟ್ಟನಂತರ ಯಾವುದೇ ದಾಖಲೆ ಬರೆಸಿಕೊಂಡಿಲ್ಲ. ಏಕೆಂದರೆ ವಿಶ್ವಾಸದಿಂದ ಇದ್ದೆವು. ರೂ.9 ಲಕ್ಷ 2 ಕಂತಿನಲ್ಲಿ ಪಾವತಿಸಿದ್ದು ಯಾವುದೇ ದಾಖಲೆ ಪಡೆದುಕೊಂಡಿಲ್ಲ. ಕೋಮದಿಗೆ ಕೊನೆ ಕಂತಿನ ಹಣ ಪಾವತಿಸಿದ ನಂತರ ಪುರಾವೆಗೋಸ್ಕರ ದಾಖಲೆ ಬರೆದುಕೊಡಲು ಕೇಳಿಕೊಂಡಿಲ್ಲ.  ಕೋಮದಿಗೆ ದಾಖಲೆ ಬರೆದುಕೊಡುವಾಗ ನಾನು, ನನ್ನ ಗಂಡ ಮತ್ತು ಮಕ್ಕಳು ಸರಿಯಾಗಿದೆ ಎಂದು ತಿಳಿದುಕೊಂಡು ಸಹಿ ಮಾಡಿದ್ದೇವೆ. ತಕರಾರಿನಲ್ಲಿ ಕೋಮದಿ ಜೊತೆ ಆಗಿರುವ ಎಲ್ಲಾ ವಿವರಣೆ ಮತ್ತು ಹಣ ಮರು ಪಾವತಿಸಿದ ಬಗ್ಗೆ ಹೇಳಿಲ್ಲ. ಆದರೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ  ನನ್ನ ತಕರಾರಿನ 10 ನೇ ಪ್ಯಾರಾದಲ್ಲಿ ಹೇಳಿದ ಎಲ್ಲಾ ಒಕ್ಕಣೆಗಳನ್ನು ನಾನೇ ಹೇಳಿ ಬರೆಸಿದ್ದೇನೆ.

ಸದರಿ ಕೋಮದಿ ದಿಃ11.11.2016 ರಂದು ಈ ದಾವೆಯ ವಾದಿ  ಮತ್ತು ಪ್ರತಿವಾದಿಯರಿಗೆಲ್ಲರಿಗೂ ಒಂದು ನೋಟೀಸ್ ಕೊಟ್ಟಿದ್ದಳು ಎಂ ದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿರುವ 2 ನೇ ವಿಳಾಸದ ವ್ಯಕ್ತಿ ಅಂದರೆ ಲಲಿತ ಅಂದರೆ ನಾನೇ. ನಿಡಿ-1 ಈ ದಾವೆಯ ಎಲ್ಲಾ ಪಕ್ಷಗಾರರಿಗೆ ಕೋಮದಿ ಕಳುಹಿಸಿದ್ದಳು ಎಂದರೆ ಸಾಕ್ಷಿ ನೆನಪಿಲ್ಲ

ಎಂದು ಹೇಳುತ್ತಾರೆ. ಈಗ ನನಗೆ ತೋರಿಸುತ್ತಿರವ ನಿಡಿ-1 ಕೋಮದಿಯಿಂದ ಪಡೆದುಕೊಂಡಿದ್ದೇನೆ. ನಿಡಿ-1 ನ್ನು ವಾದಿಗೆ ಮತ್ತು ನಮಗೆ ಹಣಖಾಸಿನ ಬಗ್ಗೆ ಸಮಸ್ಯೆ ಆದಾಗ ಕೋಮದಿಯಿಂದ ಪಡೆದುಕೊಂಡಿದ್ದೇನೆ. ನಿಡಿ-1 ನ್ಯಾಯಾಲಯದಲ್ಲಿ ಹಾಜರು ಪಡಿಸಲು ನನಗೆ ಬೇಕು ಎಂದು ನಾನೇ ಕೇಳಿ ಪಡೆದುಕೊಂಡಿದ್ದೇನೆ. ಕೋಮದಿ ನಿಡಿ-1 ರ ಪ್ರಕಾರ ವಾದಿ ಮತ್ತು ನಮ್ಮ ಮೇಲೆ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದರೆ ನನ್ನ, ನನ್ನ ಗಂಡ ಮತ್ತು ನಮ್ಮ ಮಕ್ಕಳ ಮೇಲೆ ಸದರಿ ಕೋಮದಿ ನಿಡಿ-1 ರ ಪ್ರಕಾರ ಯಾವುದೇ ಪ್ರಕರಣ ನ್ಯಾಯಾಲಯದಲ್ಲಿ ಸಲ್ಲಿಸಿಲ್ಲ ಎಂದರೆ ನಿಜ. ನಿಡಿ-1 ನಾವು ಮತ್ತು ಕೋಮದಿ ಈ ದಾವೆಗೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಕಾರದಿಂದಲೇ ಕೋಮದಿ ಇಲ್ಲಿಯವರೆಗೆ ನಮ್ಮಮೇಲೆಯಾವುದೇ ಪ್ರಕರಣ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಕೋಮದಿಗೆ ಸಂಪೂರ್ಣ ಹಣ ಕೊಡಲಾಗಿತ್ತ ಹಾಗಾಗಿ ಯಾವುದೇ ಕೇಸ್ ಮಾಡಿಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.